**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,
ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 18/2024** **ಅಸಾ.1**

**ಚಾಸಾ.1**

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಹುಲ್ |
| ತಂದೆಯ ಹೆಸರು | - | ಸುಕುಮಾರ್ ಶೆಟ್ಟಿ |
| ವಯಸ್ಸು | - | 35 ವರ್ಷ |
| ಉದ್ಯೋಗ | - | ಖಾಸಗಿ |
| ವಿಳಾಸ | - | ಕುಂದಾಪುರ. |

ದಿನಾಂಕಃ 28.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಚಾಸಾ.4, 5 ಮತ್ತು 14 ನನ್ನ ಸಹೋದರರು. ನಾವು ಸಾಲಿಗ್ರಾಮದಲ್ಲಿ ನರ್ತಕಿ ಬಾರ್ ಅಂಡ್ ರೆಸ್ಟೋರೆಂಟನ್ನು ನಡೆಸಿಕೊಂಡು ಬಂದಿರುತ್ತೇವೆ. ಅದರಲ್ಲಿ ಚಾಸಾ.6 ರಿಂದ 13 ನಮ್ಮ ಹೋಟೆಲಿನಲ್ಲಿ ಕೆಲಸ ಮಾಡುವವರು. ನಮ್ಮ ಹೋಟೆಲ್ ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ತೆರೆದಿಟ್ಟು ವ್ಯವಹಾರ ನಡೆಸುತ್ತೇವೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಹೋಟೆಲಿಗೆ ಯಾವಾಗಲೂ ಬಂದು ಊಟ ಮಾಡಿ ಮದ್ಯಪಾನ ಮಾಡಿ ಹೋಗುತ್ತಿದ್ದು, ಅವರು ನಮ್ಮ ಗ್ರಾಹಕರಾಗಿರುತ್ತಾರೆ.

2. ದಿನಾಂಕ 01.02.2023 ರಂದು ಸಂಜೆ 7 ಗಂಟೆಗೆ ಆರೋಪಿತರು ನಮ್ಮ ಹೋಟೆಲಿಗೆ ಊಟಕ್ಕೆ ಹಾಗೂ ಮದ್ಯಪಾನ ಮಾಡಲು ಬಂದಿದ್ದರು. ಅವರಿಗೆ ನಾವು 1 ನೇ ಮಹಡಿಯಲ್ಲಿ ಊಟ ಮಾಡಲು ಅವಕಾಶ ಕೊಟ್ಟಿರುತ್ತೇವೆ. ಆರೋಪಿತರು ಕುಳಿತಿದ್ದ ಟೇಬಲ್‌ಗೆ ಚಾಸಾ.7 ಗಣೇಶ್ ಶೆಟ್ಟಿ ಸಪ್ಲೈಯರ್ ಇದ್ದರು. ಆರೋಪಿತರು ಬಿಯರ್ ಆರ್ಡರ್ ಮಾಡಿರುತ್ತಾರೆ. ಚಾಸಾ7 ಅವರಿಗೆ

ಬಿಯರ್ ಸಪ್ಲೈ ಮಾಡಿರುತ್ತಾರೆ. ಆಗ ಸ್ವಲ್ಪ ಹೊತ್ತಿನಲ್ಲಿ ಅವರು ಜೋರು ಜೋರಾಗಿ ಮಾತನಾಡಲು ಪ್ರಾರಂಭಿಸಿದರು. ಆಗ ಗಣೇಶ್ ಬಂದು ಈ ವಿಚಾರವನ್ನು ಚಾಸಾ4 ರವರಿಗೆ ತಿಳಿಸಿರುತ್ತಾರೆ. ಆಗ ಚಾಸಾ4 ಸದ್ರಿ ಟೇಬಲ್ ನ ಬಳಿ ಗಮನಿಸಲು ಹೋಗಿರುತ್ತಾರೆ. ಆಗ ನನ್ನ ಅಣ್ಣ ಚಾಸಾ4 ಮತ್ತು ಆರೋಪಿತರ ನಡುವೆ ಮಾತಿಗೆ ಮಾತಾಯಿತು. ಅಲ್ಲದೆ ಅಣ್ಣನಿಗೆ ಬಿಯರ್ ಬಾಟಲಿಯಿಂದ ಹಲ್ಲೆ ಮಾಡಿದ ವಿಚಾರ ಗೊತ್ತಾಗಿ ನಾನು ಅಲ್ಲಿಗೆ ಹೋಗಿರುತ್ತೇನೆ. ನಾನು ಅಲ್ಲಿಗೆ ಹೋದಾಗ ಆರೋಪಿತರು ನನ್ನನ್ನು ದೂಡಿರುತ್ತಾರೆ, ಆಗ ನಾನು ಬಿದ್ದೆ. ಆಗ ಆರೋಪಿತರು ನನಗೆ ಕಾಲಿನಿಂದ ತುಳಿದಿರುತ್ತಾರೆ. ಆಗ ನನ್ನ ಎಡ ಕಣ್ಣಿಗೆ ಪೆಟ್ಟಾಯಿತು. ಅಲ್ಲದೆ ಬೋಳಿ ಮಕ್ಕಳೇ ಎಂದು ನನಗೆ ಆರೋಪಿತರು ಅವಾಚ್ಯವಾಗಿ ಬೈದಿರುತ್ತಾರೆ. ಇನ್ನು ಮುಂದೆ ನಿಮ್ಮನ್ನು ಬಿಡುವುದಿಲ್ಲವೆಂದು ಜೀವದ ಬೆದರಿಕೆ ಹಾಕಿರುತ್ತಾರೆ. ಆರೋಪಿತರು ನನ್ನ ಅಣ್ಣನಿಗೆ ಬಿಯರ್ ಬಾಟಲಿಯಿಂದ ಹಲ್ಲೆ ಮಾಡಿರುವುದರಿಂದ ಅಣ್ಣನ ತಲೆಗೆ ಪೆಟ್ಟಾಗಿರುತ್ತದೆ. ಆರೋಪಿತರು ಟೇಬಲ್, ಕುರ್ಚಿ, ಬಾಗಿಲನ್ನು ಜಖಂಗೊಳಿಸಿರುತ್ತಾರೆ. ಈ ಗಲಾಟೆಯನ್ನು ಚಾಸಾ.6 ರಿಂದ 13 ರವರು ನೋಡಿರುತ್ತಾರೆ. ಅಲ್ಲದೆ ಆರೋಪಿತರು ಕೆಳಗಡೆ ಹೋಗುವಾಗ ರೈಲಿಂಗ್ಸ್ ಗಳಿಗೆ ಜಜ್ಜಿ ಅವರ ಕೈಗಳಿಗೆ ಗಾಯ ಮಾಡಿಕೊಂಡು ಕೇಸು ಹಾಕುತ್ತೇವೆ ಎಂದು ಹೇಳಿ ಹೋಗಿರುತ್ತಾರೆ.

3. ನಂತರ ಗಾಯಗೊಂಡು ನಾನು ಮತ್ತು ನನ್ನ ಅಣ್ಣ ಕೋಟಾದ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನನ್ನ ಅಣ್ಣನಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಉಡುಪಿಯ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ಪೋಲಿಸರು ಕೋಟಾ ಆಸ್ಪತ್ರೆಯ ಬಳಿ ಬಂದಾಗ ನಾನು ನೀಡಿದ ದೂರನ್ನು ಸ್ವೀಕರಿಸಿರುತ್ತಾರೆ. ಸದ್ರಿ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಪೋಲಿಸರು ತಕ್ಷೀರು ಸ್ಥಳವನ್ನು ಪರಿಶೀಲಿಸಲು ನಮ್ಮ ಹೋಟೆಲಿಗೆ ಬಂದಿರುತ್ತಾರೆ. ದಿನಾಂಕ 02-02-2023 ರಂದು

ಮಧ್ಯಾಹ್ನದ ನಂತರ ಬಂದಿದ್ದರು. ಸ್ಥಳವನ್ನು ನಾನು ಪೋಲಿಸರಿಗೆ ತೋರಿಸಿರುತ್ತೇನೆ. ಪೋಲಿಸರು ಸ್ಥಳದಲ್ಲಿ ಬಿದ್ದ ರಕ್ತವನ್ನು ಸಂಗ್ರಹಿಸಿರುತ್ತಾರೆ ಮತ್ತು ಹಲ್ಲೆ ಮಾಡಲು ಬಳಸಿದ ಬಿಯರ್ ಬಾಟಲಿ ಚೂರುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಘಟನಾ ಸ್ಥಳದ ನಾಲ್ಕು ದಿಕ್ಕುಗಳಲ್ಲಿ ಬಿದ್ದಿದ್ದ ರಕ್ತವನ್ನು ಸಂಗ್ರಹಿಸಿರುತ್ತಾರೆ.

4. ತೆರೆದ ನ್ಯಾಯಾಲಯದಲ್ಲಿ ಸೀಲು ಮಾಡಿದ ಐದು ವಸ್ತುಗಳನ್ನು ತೆರೆದು ನೋಡಲಾಗಿ, ರಕ್ತದ ಮಾದರಿಗಳು ಹಾಗೂ ಕಂಟ್ರೋಲ್ ಸ್ವಾಬ್ ಮತ್ತು ಬಿಯರ್ ಬಾಟಲಿಗಳ ಚೂರುಗಳು ಇದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಎಂಓ-1 ರಿಂದ 5 ಎಂದು ಗುರುತಿಸಲಾಯಿತು. ಅದೇ ಸಮಯದಲ್ಲಿ ಪೋಲಿಸರು ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ. ಈ ಬಗ್ಗೆ ವಿವರವಾದ ಪಂಚನಾಮೆಯನ್ನು ಪೋಲಿಸರು ತಯಾರಿಸಿರುತ್ತಾರೆ. ಮಹಜರು ಕಾಲದಲ್ಲಿ ಚಾಸಾ2 ಮತ್ತು 3 ಇದ್ದು ಮಹಜರಿಗೆ ಸಹಿ ಮಾಡಿರುತ್ತಾರೆ. ಸದ್ರಿ ಮಹಜರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಗುರುತಿಸಲಾಯಿತು. 6 ಛಾಯಾ ಚಿತ್ರಗಳನ್ನು ಒಟ್ಟಾಗಿ ನಿಪಿ-3 ರಿಂದ 8 ಎಂದು ಗುರುತಿಸಲಾಯಿತು. ಘಟನೆಯ ಸಮಯ ನನ್ನ ಮತ್ತು ಚಾಸಾ4 ರವರ ಬಟ್ಟೆಗಳಿಗೆ ರಕ್ತದ ಕಲೆಯಾಗಿದ್ದು, ಅವುಗಳನ್ನು ನಂತರದಲ್ಲಿ ಪೋಲಿಸರ ಸಮಕ್ಷಮ ಹಾಜರುಪಡಿಸಿರುತ್ತೇನೆ. ಸದ್ರಿ ಬಟ್ಟೆಗಳನ್ನು ಪೋಲಿಸರು ಅಮಾನತ್ತುಪಡಿಸಿಕೊಂಡು ಪಂಚನಾಮೆ ಬರೆದಿರುತ್ತಾರೆ. ಸದ್ರಿ ಈಗ ನೋಡುತ್ತಿದ್ದು, ಅದನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಗುರುತಿಸಲಾಯಿತು. ಅದೇ ಸಮಯದಲ್ಲಿ ಛಾಯಾ ಚಿತ್ರ ತೆಗೆದಿರುತ್ತಾರೆ. ಛಾಯಾ ಚಿತ್ರವನ್ನು ನಿಪಿ-10 ಎಂದು ಗುರುತಿಸಲಾಯಿತು.

5. ಬಟ್ಟೆಗಳನ್ನು ನೋಡಿದಲ್ಲಿ ಗುರುತಿಸುತ್ತೇನೆ. ನಾಲ್ಕು ಸೀಲು ಮಾಡಿದ ಸೊತ್ತುಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ, ಚಾಸಾ4 ರವರು ಘಟನೆಯ ಸಮಯ ಧರಿಸಿದ್ದ

ನೀಲಿ ಬಣ್ಣದ ಜೀನ್ಸ್ ಪ್ಯಾಂಟ್ ಮತ್ತು ನೀಲಿ ಬಣ್ಣದ ಅರ್ಧ ತೋಳಿನ ಶರ್ಟನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಎಂಓ-6 ಮತ್ತು 7 ಎಂದು ಗುರುತಿಸಲಾಯಿತು. ಚಾಸಾ1 ಘಟನಾ ಸಮಯ ಧರಿಸಿದ್ದ ನೀಲಿ ಬಣ್ಣದ ಚಕ್ಸ್ ಶರ್ಟ್ ಹಾಗೂ ಬಿಳಿ ಬಣ್ಣದ ಸ್ಯಾಂಡೋ ಬನಿಯನ್ ಅನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಎಂಓ-8 ಮತ್ತು 9 ಎಂದು ಗುರುತಿಸಲಾಯಿತು. ನಾವು ನಮ್ಮ ಹೋಟೆಲಿಗೆ ಸಿಸಿ ಕ್ಯಾಮರಾ ಅಳವಡಿಸಿರುತ್ತೇವೆ. ಆರೋಪಿತರು ಮಾಡಿದ ಕೃತ್ಯವು ಸಿಸಿ ಫೂಟೇಜಿನಲ್ಲಿ ಸೆರೆಯಾಗಿರುತ್ತದೆ. ಸದ್ರಿ ದೃಶ್ಯಾವಳಿಗಳನ್ನು ಡೌನ್ ಲೋಡ್ ಮಾಡಿ ಪೆನ್ ಡ್ರೈವ್ ನಲ್ಲಿ ಸಂಗ್ರಹಿಸಿ ಪೋಲಿಸರಿಗೆ ಕೊಟ್ಟಿರುತ್ತೇವೆ. ಸದ್ರಿ ಪೆನ್ ಡ್ರೈವ್ ನ್ನು ನೋಡಿ ಗುರುತಿಸಿರುತ್ತಾರೆ. ತೆರೆದ ನ್ಯಾಯಾಲಯದಲ್ಲಿ ಪೆನ್ ಡ್ರೈವ್‌ನಲ್ಲಿ ಅಳವಡಿಸಲಾಗಿದ್ದ ದೃಶ್ಯಾವಳಿಗಳನ್ನು ಪ್ರದರ್ಶಿಸಿ ನೋಡಲಾಗಿ, ಸಾಕ್ಷಿದಾರರು ಆರೋಪಿತರನ್ನು ನೋಡಿ ಗುರುತಿಸಿದ್ದು, ಆರೋಪಿತರು ನನ್ನ ಅಣ್ಣನಿಗೆ ಬಿಯರ್ ಬಾಟಲಿಯಿಂದ ಹಲ್ಲೆ ಮಾಡಿರುವ ದೃಶ್ಯಾವಳಿಗಳು ಕಂಡುಬಂದಿರುತ್ತದೆ. ಆರೋಪಿತರು ನನ್ನನ್ನು ದೂಡಿ ನೆಲಕ್ಕೆ ಕೆಡವಿ ಹಲ್ಲೆ ಮಾಡಿರುವ ದೃಶ್ಯಾವಳಿಗಳು ಕಂಡುಬಂದಿದ್ದು, ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು, ಪೆನ್ ಡ್ರೈವ್ ಅನ್ನು ನಿಪಿ-11 ಎಂದು ಗುರುತಿಸಲಾಯಿತು. ಕಲಂ 65 ಬಿ ಧೃಡಪತ್ರವನ್ನು ನಿಪಿ-12 ಎಂದು ಗುರುತಿಸಲಾಯಿತು. ದೃಶ್ಯಾವಳಿಗಳನ್ನು ಸಂಗ್ರಹಿಸಿದ ಸಮಯದಲ್ಲಿ ಮಾಡಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಸದ್ರಿ ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-13, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಎರಡು ಛಾಯಾ ಚಿತ್ರಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-14 ಮತ್ತು 15 ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಮರು ಹೇಳಿಕೆಯನ್ನು ಪಡೆದು ಕೊಂಡಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿತರ ಪರವಾಗಿ ಶ್ರೀ ಎ.ಬಿ.ಎಚ್.ವಕೀಲರಿಂದಃ</u>**

ಆರೋಪಿತರಿಗೆ ಪೆನ್‌ಡ್ರೈವ್‌ವನ್ನು ನೀಡದ ಕಾರಣ, ತನಿಖಾಧಿಕಾರಿಗೆ ಪೆನ್‌ಡ್ರೈವ್ ಅನ್ನು ಒದಗಿಸಲು ನಿರ್ದೇಶಿಸಿ ಪಾಟಿ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.